[illegible]

App. F. IX-4

1928

LB

Previous References (

File No. 146 26

Serial Nos. 18, 20

Later References

General and Revenue Secretariat.

Serial Nos. Two

Part B for Dec 1928.

SUBJECT

Resolution of the Tumkur Dt Bd in the matter of the levy of fees at the Hebbur Shandy in the district.

No. L 3902-3 dy 1 12 28

To the P. D Bd, Tumkur
the Comptroller

Sanctions the recommendation of the P. D Bd referred to

9/1/29

L1678

App F. III—2]

General and Revenue Secretariat | LB File No. 146 of 1926

Serial No.

18 Letter no. GC 880/26-27 dated 8/10/26 from the President DBo Tumkur requesting sanction to the resolution of the DBd in the matter of the levy of fees at the Hebbur shandy in the District.

1 The rates at which fees have to be levied have been sanctioned for the District in general in GO no L 1295 LB 21-26-2 dated 20.8.26. ~~The~~.

2 The general question of assigning a share of realisations from shandies in the Districts, to the respective Panchayets is being separately dealt with and the President solicits sanction to the proposal pending orders on the general question ~~and subject~~ to the payment of ~~the~~ ~~share due to the Board according to~~ a portion of the shandy revenue to the village Panchayats ~~the proportion that may be fixed~~ by Govt ~~later on~~.

Draft sanctioning the proposal is submitted for consideration and orders

18/10 / w 110 26

4 Submitted with the file LB 146-26 (linked) dealing with the general subject

9/11/26

NOTE—Contn. she

WD 021—GPB—30,000—21-8-28

3 L 1678

App. F. III—2]

General and Revenue
Secretariat.

File No. of 192

Serial No. 20

No L 3902-3 of 1/12/28. Government on Tenkasi township sanctions the recommendation of the [illegible] and refer to

The linked file L.Dis 146-26 dealing with the general subject may now be referred to the concerned case-worker, for being further worked up with reference to (para of supra)

B3
1/12/28

B3
B3
4/12

GEN. & REV. SECTT.
20 DEC. 28
L. S. G. BRANCH

NOTE—Contn. Sheet.

Board, Tumkur, held in the Deputy Commissioner's Office on Saturday the 28th August 1926.

Subject No. 58.

a) Letter No. [illegible] .146-25-26 dated [illegible] from the General Secretary to Government stating that the question of assigning a share of realisations from Shandies in the District to the Panchayets concerned is under the consideration of Government etc.

b) Report No. 25 dated 25-8-26 from the Chairman, Village Panchayet, [illegible], forwarding resolution of the Panchayet dated 24-8-26 in the matter of levying fees in the weekly shandy at Hebbur, and requesting sanction to the same etc.

Resolution:- Resolved that fees may be levied at the sanctioned rates, subject to the payment of the share due to the Board according to the proportion that may be fixed by Government.

" Extract "

for President, District Board,
Tumkur District.

ASD.

ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರಿಂದ ತಯಾರ್ಮಾಡಲ್ಪಟ್ಟ ಬೈಲಾ.

ಮೈಸೂರು ಲೋಕಲ್‌ಬೋರ್ಡ್ ಮತ್ತು ಗ್ರಾಮಪಂಚಾಯತಿ ರೆಗ್ಯುಲೇಷನ್ 38 ನೇ ಪ್ರಕರಣಕ್ಕನುಸಾರವಾಗಿ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ ಮೇಲ್ವಿಚಾರಣೆಗೆ ಒಳಪಟ್ಟ ಸರಹದ್ದಿನಲ್ಲಿರುವ ಮಾರ್ಕೆಟ್ಟುಗಳನ್ನು ಕ್ರಮಪಡಿಸುವುದಕ್ಕೂ, ಇನ್ಸ್‌ಪೆಕ್ಷನ್ ಮಾಡುವುದಕ್ಕೂ, ಮತ್ತು ಹತೋಟಿಯಲ್ಲಿ ತರುವುದಕ್ಕೂ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನವರಿಂದ ತಯಾರ್ಮಾಡಲ್ಪಟ್ಟ ನಿಬಂಧನೆಗಳು ಯಾ ಬೈಲಾಗಳು ಇದರಡಿ ನಮೂದಿಸಿರುತ್ತೆ. ಈ ಬೈಲಾಗಳನ್ನು ತುಮಕೂರು ಡಿಸ್ಟ್ರಿಕ್ಟಿನಲ್ಲಿ ಜಾರಿಗೆತರಲು ಸರ್ಕಾರದವರ ಹುಕ್ಕುಂ ಅಪೇಕ್ಷಿಸಿರಲಾಗಿ ಅಪ್ರೂವ್ ಮಾಡಿರುವಂತೆ 20—8—26 ನೇ ಮರ್ಕುಂ L. 1295/L. B. 21—26—2 ನೇ ನಂ. ಸರ್ಕಾರಿ ಹುಕ್ಕುಂ ತಲಪಿರುತ್ತೆ.

1. ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರವರ ಲಿಖಿತಮೂಲಕವಾದ ಅಪ್ಪಣೆ ಇಲ್ಲದೆ ಡಿಸ್ಟ್ರಿಕ್ಟಿನ ಯಾವ ಪಬ್ಲಿಕ್ ಜಾಗವನ್ನು ಆಹಾರ ಸಂಬಂಧ ಪದಾರ್ಥಗಳನ್ನಾಗಲಿ ಜವಳಿ ಮೊದಲಾದ ಜನೋಪಯೋಗ ಪದಾರ್ಥವನ್ನಾಗಲೀ ಜಾನುವಾರುಗಳನ್ನಾಗಲೀ ಮಾರತಕ್ಕ ಮಾರ್ಕೆಟ್ಟುಗಳಾಗಿ ಉಪಯೋಗಿಸತಕ್ಕದ್ದಲ್ಲ.

2. ಎಲ್ಲಾ ಪಬ್ಲಿಕ್ ಮಾರ್ಕೆಟ್ಟುಗಳೂ ಮೇಲ್ಪಟ್ಟ ಆಫೀಸರುಗಳ ಅಧಿಕಾರಕ್ಕೊಳಪಟ್ಟು ಮಾರ್ಕೆಟ್ಟು ಸೂಪರಿಂಟೆಂಡೆಂಟರವರ ಇನ್ಸ್‌ಪೆಕ್ಷನ್ ಮತ್ತು ಜನರಲ್ ಸೂಪರವಿಷನ್ನಲ್ಲಿರತಕ್ಕದ್ದು.

(*a*) ಗ್ರಾಮ ಪಂಚಾಯಿತಿ ಸರಹದ್ದಿನಲ್ಲಿರುವ ಮಾರ್ಕೆಟ್ಟುಗಳಿಗೆ ಡಿಸ್ಟ್ರಿಕ್ಟ್ ಬೋರ್ಡ್ ಪ್ರೆಸಿಡೆಂಟರ ಅನ್ಯಥಾ ಆರ್ಡರ್ ಇದ್ದ ಶಿವಾಯಿ ಗ್ರಾಮ ಪಂಚಾಯಿತಿ ಛೇರ್ಮನ್ನರುಗಳೇ ಮಾರ್ಕೆಟ್ಟು ಸೂಪರಿಂಟೆಂಡೆಂಟರಾಗಿರತಕ್ಕದ್ದು.

(*b*) ಇತರ ಸ್ಥಳಗಳಲ್ಲಿ ಲೋಕಲ್ ಬೋರ್ಡುಗಳಿಂದ ಇವಕ್ಕಾಗಿ ನೇಮಿಸಲ್ಪಡುವ ಜನ ಅಥವಾ ಜನಗಳೇ ಮಾರ್ಕೆಟ್ಟು ಸೂಪರಿಂಟೆಂಡೆಂಟರಾಗಿರತಕ್ಕದ್ದು.

3. ಯಾವ ಪಬ್ಲಿಕ್ ಮಾರ್ಕೆಟ್ಟುಗಳೂ ಜನಗಳ ಉಪಯೋಗಕ್ಕಾಗಿ ಪ್ರಾತಃಕಾಲ 6 ಘಂಟೆಗೆ ಮೊದಲೂ ರಾತ್ರಿ 8 ಘಂಟೆ ಮೇಲೂ ತೆರದಿರಕೂಡದು.

4. ಶ್ವೇತಕುಷ್ಟ ವ್ಯಾಧಿಯಿಂದಾಗಲೀ ಅಥವಾ ಮತ್ಯಾವ ಒಬ್ಬನಿಂದ (ಸಾಂಕ್ರಾಮಿಕ) ಒಬ್ಬರಿಗೆ ಹರಡುವ ರೋಗದಿಂದಾಗಲಿ ನರಳುತ್ತಿರುವ ಯಾವ ಮನುಷ್ಯನೂ ಮಾರ್ಕೆಟ್ಟಿನಲ್ಲಿ ಪದಾರ್ಥಗಳನ್ನು ಮಾರಲೂಕೂಡದು. ಅಥವಾ ಮಾರ್ಕೆಟ್ಟುಗಳನ್ನು ಪ್ರವೇಶಿಸಲೂ ಕೂಡದು. ಆ ರೀತಿ ಪ್ರವೇಶಮಾಡುವ ಅಂಥಾ ಯಾವ ಖಾಯಿಲೆಯವರನ್ನು ಆಗಲಿ ಮಾರ್ಕೆಟ್ಟು ಸೂಪರಿಂಟೆಂಡೆಂಟರುಗಳು ಆಚೆಗೆ ಕಳುಹಿಸಿಬಿಡಬಹುದು.

5. ಯಾವ ಮನುಷ್ಯನೂ ಮಾರ್ಕೆಟ್ಟುಗಳಲ್ಲಿ ಹಾಡುವುದು ತಮಟೆಗಳು ಬಾರಿಸುವುದು ಅಥವಾ ಇತರ ವಿಧವಾದ ವಾದ್ಯಗಳು ನಡಿಸುವುದು ಇಲ್ಲವೆ ದುರ್ಭಾಷೆಗಳನ್ನು ಆಡುತ್ತಾ ವ್ಯಾಜ್ಯಗಳನ್ನು ಮಾಡುವುದು ಮೊದಲಾಗಿ ನಿಷೇಧಿಸಲ್ಪಟ್ಟಿರುತ್ತೆ.

6. ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರವರಿಂದ ನಿರ್ದೇಶಿಸಲ್ಪಟ್ಟ ಜಾಗಾಗಳಲ್ಲಿ ಹೊರತು ಮತ್ತು ಯಾವ ಕಟ್ಟಡದಿಂದಲೇ ಆಗಲಿ 5 ಗಜ ಫಾಸಲೆಯೊಳಗೆ ಯಾವ ಪಬ್ಲಿಕ್ ಮಾರ್ಕೆಟ್ಟಿನಲ್ಲೂ ಯಾವ ಮನುಷ್ಯನೂ ಬೆಂಕಿಯನ್ನು ಹತ್ತಿಸತಕ್ಕದ್ದಲ್ಲ.

7. ಸಾಮಾನುಗಳನ್ನು ಭರ್ತಿ ಮಾಡುವಾಗ ಮತ್ತು ಭರ್ತಿ ಇಳಿಸುವಾಗ ಹೊರತು ಮಿಕ್ಕ ಕಾಲಗಳಲ್ಲಿ ಯಾವ ಪಬ್ಲಿಕ್ ಮಾರ್ಕೆಟ್ಟುಗಳಲ್ಲೂ ಕ್ಲಿಪ್ತಕಾಲಕ್ಕಿಂತಲೂ ಜಾಸ್ತಿಯಾಗಿ ಯಾವ ಗಾಡಿಗಳನ್ನಾಗಲಿ ಹೇರುಗಳನ್ನಾಗಲಿ ಯಾವ ಪ್ರಾಣಿಗಳನ್ನಾಗಲಿ ನಿಲ್ಲಿಸತಕ್ಕದ್ದಲ್ಲ.

8. ಯಾವ ಪಬ್ಲಿಕ್ ಮಾರ್ಕೆಟ್ಟುಗಳ ಯಾ ಅಂಗಡಿಗಳ ತಂಗಳಗಳ ಮತ್ತು ಇವುಗಳೊಳಗಿನ ಯಾವ ಪ್ರದೇಶವಲ್ಲೇ ಆಗಲಿ ಯಾವ ಮನುಷ್ಯನೂ ಗುತ್ತಿಗೆ ಪಡದಿರುವವನೂ ಸಹಾ ಕಟ್ಟಡಗಳಿಗೂ, ಗೋಡೆಗಳಿಗೂ, ನೆಲಗಳಿಗೂ ಯಾವ ವಿಧವಾದ ಕೆಡಕನ್ನೂ ಮಾಡಲೂ ಕೂಡದು ಮತ್ತು ಮಾಡಲು ಅವಕಾಶವೂ ಕೊಡಕೂಡದು ಮತ್ತು ತಾಲ್ಲೂಕು ಬೋರ್ಡಿನ ಪ್ರೆಸಿಡೆಂಟರ ಲಿಖಿತಮೂಲಕವಾದ ಅಪ್ಪಣೆ ಶಿವಾಯಿ ಕಟ್ಟಡದ ಆಕಾರ ಬದಲಾವಣೆಮಾಡಲು ಅವಕಾಶವೂ ಕೂಡಬಾರದು.

9. ಮಾರ್ಕೆಟ್ಟಿನ ಅಥವಾ ಇದರೊಳಗಿನ ಅಂಗಡಿಗಳ ಪ್ರತಿಯೊಬ್ಬ ಸ್ವಂತ ಕರ್ತನೂ ರೈತನೂ ಬಾಡಿಗೆ ಇರುವವನೂ ಏಜಂಟ್ ಮ್ಯಾನೇಜರೂ ಮತ್ತು ಇವುಗಳನ್ನು ಸ್ವಾಧೀನತೆಯಲ್ಲಿ ಇಟ್ಟುಕೊಂಡಿರುವ ಪ್ರತಿಯೊಬ್ಬ ಮನುಷ್ಯನೂ ಇವುಗಳನ್ನು ಪಾಕಾಗಿಯೂ ಸ್ಯಾನಿಟೇಷನ್‌ಗೆ ಅನುಸಾರವಾಗಿಯೂ ಇಡತಕ್ಕದ್ದು.

10. ಅಂಗಡಿಗಳ ಮತ್ತು ತಂಗಳಗಳ ಮುಂದೆ ಯಾವ ತರಹಾ ಸೂರುಗಳು ಮುಂದಕ್ಕೆ ಬರಲು ಅಥವಾ ಕೂತುಕೊಳ್ಳುವ ಜಾಗಾಗಳನ್ನು ಮುಂದಕ್ಕೆ ಬಡಾಯಿಸಲೂ ಅವಕಾಶಕೊಡತಕ್ಕದ್ದಲ್ಲ.

11. ಯಾವ ಮಾರ್ಕೆಟ್ಟಿನಲ್ಲೂ ಯಾವ ಮನುಷ್ಯನಾಗಲಿ ಸರ್ಕಾರದವರಿಂದ ಗೊತ್ತಾದ ಚಾಲ್ತಿಯಲ್ಲಿರುವ ಸೇರುಗಳು ಮತ್ತು ತೂಕದ ಬಟ್ಟುಗಳೊಂದಿಗೆ ತೂಗಿಸಿ ತೂಕ ಸರಿಯಾಗಿಯೂ ಮುದ್ರೆ ಸರ್ಕಾರದವರಿಂದ ಹಾಕಿಸಿರುವುದಾಗಿ ನಿಷ್ಕರ್ಷೆಯಾದ ಹೊರತು ಮತ್ತಾವ ವಿಧವಾದ ಅಳತೆ ಸೇರುಗಳು ತೂಕದ ಬಟ್ಟುಗಳನ್ನೂ ಉಪಯೋಗಿಸ ಕೂಡದು.

12. ಮಾರುವುದಕ್ಕೆ ತರುವ ಸಾಮಾನುಗಳು ಪ್ರತಿಯೊಂದು ಗೊತ್ತಾದ ಅವರವರ ಸ್ಥಳಗಳಲ್ಲಿ ಹೊರತು ಮಿಕ್ಕ ಸ್ಥಳಗಳಲ್ಲಿ ಡತಕ್ಕದ್ದಲ್ಲ

13. ಜಾರಿಯಲ್ಲಿರುವ ಗ್ರಾಮ ಪಂಚಾಯತಿ ನಿಬಂಧನೆಗಳಿಗೆ ಒಳಪಟ್ಟು ಈ ವಿಚಾರದಲ್ಲಿ ಅಧಿಕಾರ ಪಡೆದಿರುವವರಿಂದ ಜನಗಳ ಆಹಾರಕ್ಕೆ ಉಪಯೋಗವಾದವುಗಳಲ್ಲವೆಂಬದಾಗಿ ತಿರಸ್ಕರಿಸಲ್ಪಟ್ಟ ಯಾವ ಆಹಾರ ಪದಾರ್ಥಗಳನ್ನೇ ಆಗಲಿ ಮಾಂಸ, ಮೀನು, ತರಕಾರಿ ಮತ್ತು ಹಣ್ಣುಗಳನ್ನಾಗಲಿ ಯಾವ ಮಾರ್ಕೆಟ್ಟಿನಲ್ಲೂ ಯಾವ ಮನುಷ್ಯನೂ ಮಾರಲೂ ಕೂಡದು ಮತ್ತು ಮಾರುವುದಕ್ಕಾಗಿ ಮಾರ್ಕೆಟ್ಟುಗಳಲ್ಲಿ ಇಡಲೂ ಕೂಡದು.

14. ಸಾಂಕ್ರಾಮಿಕ ಜಾಡ್ಯಗಳಿಂದ ನರಳುತ್ತಿರುವ ಯಾವ ಪ್ರಾಣಿಯನ್ನೂ ಮಾರ್ಕೆಟ್ಟಿನೊಳಗೆ ಮಾರಲು ತರಲೂ ಕೂಡದು ಮತ್ತು ಮಾರಲೂ ಕೂಡದು.

15. (i) ತಾಲ್ಲೂಕ್ ಬೋರ್ಡಿನವರು ಕನ್ನಡ ಭಾಷೆಯಲ್ಲಿ ನೋಟೀಸುಗಳನ್ನು ಪ್ರಸಿದ್ಧಪಡಿಸಿ ನೋಟೀಸಿನಲ್ಲಿ ಕಾಣಿಸಿರುವ ವಾಯಿದೆಯ ನಂತರ ಯಾವ ಸಾಮಾನನ್ನೇ ಆಗಲಿ ಸಾಮಾನುಗಳನ್ನೇ ಆಗಲಿ ಇದಕ್ಕಾಗಿ ಗೊತ್ತು ಮಾಡಲ್ಪಡುವ ಜಾಗಗಳಲ್ಲಿ ಹೊರತು ಪಬ್ಲಿಕ್ ಮಾರ್ಕೆಟ್ಟಿನ ಮತ್ತಾವ ಭಾಗದಲ್ಲೂ ಮಾರಲೂ ಕೂಡದು ಮತ್ತು ಮಾರಲು ಇಡಲೂ ಕೂಡದು.

(ii) ಅಂಥಾ ನೋಟೀಸು ಒಂದನ್ನು ಮಾರ್ಕೆಟ್ಟಿನಲ್ಲಿ ಜನಗಳಿಗೆ ಗೊತ್ತಾಗುವ ಸ್ಥಳಕ್ಕೆ ಚಿಕಟಾಯಿಸ ತಕ್ಕದ್ದು.

(iii) ನೋಟೀಸು ಈರೀತಿಯಾಗಿ ಪ್ರಸಿದ್ಧಪಡಿಸಿದ ನಂತರ ನೋಟೀಸಿನಲ್ಲಿ ಕಂಡ ಷರತ್ತುಗಳಿಗೆ ವಿರೋಧವಾಗಿ ಯಾವ ಮನುಷ್ಯನೂ ಅಂಥಾ ಪದಾರ್ಥಗಳನ್ನು ಮಾರ್ಕೆಟ್ಟುಗಳಲ್ಲಿ ಮಾರಲೂಕೂಡದು ಮಾರುವುದಕ್ಕೆ ಇಡಲೂ ಕೂಡದು

16. ಜನಗಳು ತಿರುಗಾಡುವ ದಾರಿಗೆ ಅಡ್ಡಲಾಗಿರುವ ಅಥವಾ ಅಂಗಡಿಗಳಲ್ಲಿ ತುಂಬಿರುವುದರಿಂದ ಘಾಳಿಗೆ ವಿರೋಧವಾಗಿರುವಂತೆ ಕಾಣಬರುವ ಎಲ್ಲಾ ಸುತ್ತಿಗಳು ಪೆಟ್ಟಿಗೆಗಳು ಪೀಪಾಯಿಗಳು ಮೊದಲಾದ ಸಾಮಾನುಗಳನ್ನು ಮಾರ್ಕೆಟ್ಟಿನಿಂದ ಆಚೆಗೆ ಅಥವಾ ಸೂಪರಿಂಟೆಂಡೆಂಟರಿಂದ ನಿಷ್ಕರ್ಷಿಸಲ್ಪಟ್ಟ ಜಾಗಾಕ್ಕೆ ಒಂದು ಅಂಗಡಿ ಅಥವಾ ಒಂದು ಕಟ್ಟಡದ ಹಿಡುವಳಿದಾರನಾಗಲಿ ಅಥವಾ ವಾಸವಿರುವವನೇ ಆಗಲಿ ಕೂಡಲೇ ಸಾಗಿಸಿಬಿಡಬೇಕು.

ಮಾಂಸದ ಅಂಗಡಿಗಳು.

17. ಯಾವ ಮಾಂಸದ ಅಂಗಡಿಯವನೇ ಆಗಲಿ ಮಾರ್ಕೆಟ್ಟುಗಳಲ್ಲಿಯೂ ಅಂಗಡಿಗಳಲ್ಲಿ ಸೂಪರಿಂಟೆಂಡೆಂಟರ ಸ್ಪೆಷಲ್ ಮಂಜೂರಿ ಹುಕುಂ ಶಿವಾಯಿ ಕಾಲುಗಳು. ಹಾಕಿರುವ ಭೂಮಟ್ಟಕ್ಕಿಂತಲೂ ಒಂದಡಿ ಎತ್ತರಕ್ಕೆ ಕಡಿಮೆಯಾದ ಕಾಲುಮಣೆಗಳನ್ನೂ, ಪೆಟ್ಟಿಗೆಗಳನ್ನೂ ಇನ್ನೂ ಇತರ ಯಾವ ಮರದ ಸಾಮಾನುಗಳನ್ನು ಇಡಕೂಡದು.

18. ಅಂಥಾ ಮಾಂಸದ ಅಂಗಡಿಯ ಪ್ರತಿಯೊಬ್ಬ ವಾಸಸ್ಥನೂ ತಾನು ಇಟ್ಟುಕೊಂಡಿರುವ ಮಾಂಸವನ್ನು [illegible] ಬೆಳಕಿಗೆ ತೆರದಿಡಬೇಕೇ ಶಿವಾಯಿ ಯಾವ ಕಾರಣದಿಂದಲೂ ಪಟ್ಟಗಗಳಲ್ಲೂ ಮುಚ್ಚಿರತಕ್ಕ ಪಾತ್ರಗಳಲ್ಲೂ ಇರಿಸಕೂಡದು.

19. ಮಾಂಸದ ಅಂಗಡಿಯ ಯಾವ ವಾಸಸ್ಥನೂ ದಾರಗಳನ್ನೂ ಹಗ್ಗಗಳನ್ನೂ ಮತ್ತಾವ ಮಾಸಿದ ಬಟ್ಟೆಗಳನ್ನೂ ಮತ್ತು ನೊಣ ಮುಸುಕುವ ಕೊಳೆಯಾದ ಚಾಪೆಗಳು ಚೀಲಗಳು ಕೊಬ್ಬು ಸವಂದ ಬೊಂಬುಗಳು ಮೊದಲಾದ ಸಾಮಾನುಗಳನ್ನು ಇಡಕೂಡದು.

20. ಮಾಂಸದ ಅಂಗಡಿಯ ಪ್ರತಿಯೊಬ್ಬ ವಾಸಸ್ಥನೂ ಕತ್ತರಿಸುವ ಆಯುಧಗಳನ್ನು ಚೆನ್ನಾಗಿ ಉಜ್ಜಿ ಇಳಿಜಾರು ಅಂಚುಗಳಿಂದ ಕೂಡಿ ಶುದ್ಧವಾಗಿರುವಂತೆ ಇಟ್ಟಿರಬೇಕು.

21. ಪ್ರತಿಯೊಬ್ಬ ಮಾಂಸದ ಅಂಗಡಿ ವಾಸಸ್ಥನು ತಾನು ಬಿಟ್ಟುಹೋಗುವುದಕ್ಕೆ ಮೊದಲು ತನ್ನ ಕತ್ತರಿಸುವ ಸಾಮಾನುಗಳನ್ನು ಮತ್ತು ಮಾಂಸದ ಹಲಿಗೆಯನ್ನೂ ನಾಯಿಗಳೂ ಮತ್ತು ಇತರ ಪ್ರಾಣಿಗಳೂ ಬಂದು ನೆಕ್ಕುವುದಕ್ಕೆ ಅವಕಾಶವಿಲ್ಲದಂತೆ ಭದ್ರಪಡಿಸತಕ್ಕದ್ದು.

22. ಅಂಥಾ ಮಾಂಸದ ಅಂಗಡಿಯ ಯಾವ ಬಾಡಿಗೆದಾರನಾಗಲಿ ವಾಸಸ್ಥನಾಗಲಿ (ತನ್ನ ಕೈಗಳು) ಮತ್ತು ಬಟ್ಟೆ ವಿನಹಾ ತನ್ನ ಶರೀರದ ಯಾವ ಭಾಗವನ್ನೂ ಮಾಂಸಕ್ಕೆ ತಗಲುವುದಕ್ಕೆ ಅವಕಾಶಕೂಡಕೂಡದು.

23. ಎಲ್ಲಾ ಅಂಗಡಿಗಳು ಮತ್ತು ತಂಗಳಗಳೂ ಮಾರುವದಕ್ಕೆ ತರಲ್ಪಟ್ಟ ಪ್ರಾಣಿಗಳೂ ಪೋಲೀಸ್, ರೆವಿನ್ಯೂ ಮತ್ತು ಸ್ಯಾನಿಟರಿ ಇಲಾಖೆ ಆಫೀಸರುಗಳಿಂದಲೂ ಡಿಸ್ಟ್ರಿಕ್ಟ್ ಬೋರ್ಡಿನ ಆಫೀಸರುಗಳಿಂದಲೂ ಮತ್ತು ಆಯಾಯ ಪ್ರತಿ ತಾಲ್ಲೂಕು ಬೋರ್ಡ್ ಮತ್ತು ಗ್ರಾಮ ಪಂಚಾಯಿತಿಯ ಆಫೀಸರುಗಳಿಂದಲೂ (ತಮ್ಮ ಅಧಿಕಾರಕ್ಕೆ ಒಳಪಟ್ಟ ಪ್ರದೇಶಗಳಲ್ಲಿನ ಮಾರ್ಕೆಟ್ಟುಗಳಲ್ಲಿ) ಮತ್ತು ಈ ವಿಚಾರದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನ ಪ್ರೆಸಿಡೆಂಟರಿಂದ ಈ ಭಾಗದಲ್ಲಿ ಅಧಿಕಾರ ಪಡೆದವರಿಂದಲೂ ಅಜಮಾಯಿಷಿಗೆ ಅರ್ಹವಾಗಿರತಕ್ಕದ್ದು.

ಸೂಪರಿಂಟೆಂಡೆಂಟರುಗಳ ಅಧಿಕಾರಗಳು.

24. ಮಾರ್ಕೆಟ್ಟುಗಳಲ್ಲಿ ಕುಡಿದವರಾಗಲಿ ತಿರುಪೆ ಬೇಡುವ ಕಾರಣದಿಂದಾಗಲಿ ಸುತ್ತಾಡುತ್ತಿರುವವರನ್ನೂ ದುರ್ನಡತೆಯಲ್ಲಿರುವವರನ್ನೂ, ಹುಚ್ಚುಹಿಡಿದು ತಿರುಗಾಡುವವರನ್ನೂ ಮೇಲ್ಕಂಡ ಬೈಲಾಗಳಿಗೆ ವಿರೋಧವಾಗಿ ನಡೆಯುವವರನ್ನೂ ಯಾವ ಪಬ್ಲಿಕ್ ಮಾರ್ಕೆಟ್ಟಿನ ಸೂಪರಿಂಟೆಂಡೆಂಟರಾಗಲಿ ಅಥವಾ ಅವರ ನೌಕರರಾಗಲಿ (ತಾಲ್ಲೂಕು

ಬೋರ್ಡ್ ಪ್ರೆಸಿಡೆಂಟರವರ) ಮಂಜೂರಿಗೆ ಒಳಪಟ್ಟು ವ್ಯಾಪಾರ ಮಾಡುತ್ತಿರಲಿ ಮಾರ್ಕೆಟ್ಟಿನಲ್ಲಿ ಕೆಲಸದಮೇಲೆ ಬಂದವರಾಗಲಿ ಯಾವ ಕಟ್ಟಡದ ಅಂಗಡಿ ಅಥವಾ ತಂಗಳಗಳಲ್ಲಿ ಬಾಡಿಗೆಗೆ ವಾಸವಾಗಿರುವವರಾಗಲಿ ಹಿಡುವಳಿದಾರರಾಗಲಿ ಮತ್ತು ಮಾರಾಟಮಾಡುವವರಾಗಿರಲಿ ಇವರುಗಳ ನೌಕರರೇ ಆಗಲಿ ಅಂಥವರನ್ನು ಆಚೆಗೆ ಕಳುಹಿಸಿಬಿಡಬಹುದು.

25. ಎಲ್ಲಾ ಬಾಡಿಗೆದಾರರುಗಳೂ ಹಿಡುವಳೀದಾರರೂ ವಾಸಮಾಡುವವರೂ ಮತ್ತು ಮಾರುವವರೂ ಮತ್ತು ನೌಕರರೂ ಅಂಥಾ ಮಾರ್ಕೆಟ್ಟುಗಳ ಸೂಪರಿಂಟೆಂಡೆಂಟರ ಎಲ್ಲಾ ನ್ಯಾಯವಾದ ಆರ್ಡರುಗಳನ್ನು ಜಾರೀಗೆ ತರತಕ್ಕದ್ದು. ಪದೇಪದೇ ಕೊಡುವ ಇಂಥಾ ಆರ್ಡರುಗಳಮೇಲೆ ಪ್ರೆಸಿಡೆಂಟರಿಗಾಗಲಿ ಅಥವಾ ಯಾವ ಲೋಕಲ್ ಬೋರ್ಡಿನ ಮ್ಯಾನೇಜಿಂಗ್ ಕಮಿಟಿಯವರಿಗಾಗಲೀ ಅಪ್ಪೀಲ್ ಇಡತಕ್ಕದ್ದು.

ಜನರಲ್.

26. ಇದಕ್ಕೆ ಲಗತ್ತಿರುವ ಪಟ್ಟಿಯಲ್ಲಿ ಕಂಡ ದರಗಳಂತೆ "ಫೀ" ವಸೂಲ್ಮಾಡಲು ಮತ್ತು ಈ ದರಗಳನ್ನು ಆಗಿಂದಾಗ್ಯೆ ಬದಲಾವಣೆಮಾಡಲು ಡಿಸ್ಟ್ರಿಕ್ಟ್ ಬೋರ್ಡಿಗೆ ಅಧಿಕಾರವಿರತಕ್ಕದ್ದು.

27 ಈ ರುಸುಂಗಳನ್ನು ವಸೂಲ್ಮಾಡಲು ಇಲಾಖೆ ಮಾರ್ಫತ್ತು ಬೋರ್ಡಿನ ನೌಕರರಿಂದಾಗಲಿ ಅಥವಾ ಆಗಿಂದಾಗ್ಯೆ ಡಿಸ್ಟ್ರಿಕ್ಟ್ ಬೋರ್ಡಿನಿಂದ ನಿಷ್ಕರ್ಷೆಯಾದ ಷರತುಗಳಿಗೆ ಅನುಸಾರವಾಗಿ ಖಾಸಗಿ ಜನಗಳಿಂದಾಗಲಿ ಮೇಲ್ಕಂಡ ಕಾನೂನಿಗೆ ವಿರೋಧವಿಲ್ಲದೆ ವಸೂಲ್ಮಾಡತಕ್ಕದ್ದು.

28. ನಿಷ್ಕರ್ಷೆಯಾದ ಬಾಡಿಗೆ ಅಥವಾ ರುಸುಮನ್ನು ಪೂರ್ತಿಯಾಗಿ ಪಾವತಿಮಾಡಲು ತಪ್ಪುವ ಪ್ರತಿ ಷಾಪುಗಳ ಅಂಗಡಿಗಳ ಹಿಡುವಳಿದಾರರೂ ಅಥವಾ ಅಧಿಕಾರ ಹೊಂದಿದ ಅನುಭವದಾರರೂ ಮಾರ್ಕೆಟಿನಿಂದ ಆಚೆಗೆ ಹೊರಡಿಸಲ್ಪಡುವರು.

29. ಕೌಂಟರ್‌ಫೈಲ್ ಟಿಕೆಟ್ ಬುಕ್ಕುಗಳನ್ನಿಟ್ಟು ರುಸುಂ ಸಂದ ಒಡನೆ ರಶೀತಿಗಳು ಕೊಡತಕ್ಕದ್ದು. ಪದಾರ್ಥಗಳನ್ನು ಮಾರುವುದಕ್ಕೆ ತರುವ ಸಾಮಾನುಗಳಿಗೆ ನಿಷ್ಕರ್ಷೆಯಾದ ರುಸುಂ ಪಾವತಿಮಾಡಿದ ಹೊರತು ಮಾರ್ಕೆಟ್ಟಿನ ಒಳಗಡೆ ಪ್ರವೇಶ ಮಾಡಲು ಅವಕಾಶ ಕೊಡಲಾಗದು.

30 ಟಿಕೆಟ್ಟುಗಳಿಲ್ಲದೆ ವ್ಯಾಪಾರ ಮಾಡುವುದು ಕಂಡು ಹಿಡಿಯಲ್ಪಟ್ಟರೆ ಅಂಥವರಿಂದ ಮಾರ್ಕೆಟ್ಟು ಸೂಪರಿಂಟೆಂಡೆಂಟರು ದುಗಣಿ ರುಸುಂ ವಸೂಲ್ಮಾಡುತ್ತಾರೆ. ಮತ್ತು ಹಣ ವಸೂಲ್ ಬರುವವರಿಗೂ ಇವಕೆ ತಕಷು, ಸಾಮಾನುಗಳು ಮಾರ್ಕೆಟ್ಟು ಸೂಪರಿಂಟೆಂಡೆಂಟರಿಂದ ಹಿಡಿಯಲ್ಪಡುವುವು.

31. ಮೇಲ್ಕಂಡ ಬೈಲಾಗಳಿಗೆ ವಿರೋಧವಾಗಿ ನಡೆಯುವ ಪ್ರತಿಯೊಬ್ಬ ಮನುಷ್ಯನೂ ಮ್ಯಾಜಿಸ್ಟ್ರೇಟರುಗಳ ಮುಂದೆ ತಪ್ಪು ಸಾಬೀತಾದಲ್ಲಿ ಈ ಬೈಲಾಗಳಲ್ಲಿ ಕಂಡ ಶೀಕ್ಷೆಯೊಂದಿಗೆ ಪ್ರತಿಯೊಂದು ತಪ್ಪಿತಕ್ಕೂ 10 ರೂಪಾಯಿಗೆ ಮೀರದಂತೆ ಜುಲ್ಮಾನೆ ವಿಧಿಸಲ್ಪಡುವನು. ಮತ್ತು ಇಂಥಾ ತಪ್ಪಿತಗಳನ್ನು ಪದೇ ಪದೇ ಮಾಡುತ್ತಿದ್ದಲ್ಲಿ ಡಿಸ್ಟ್ರಿಕ್ಟ್ ಬೋರ್ಡಿನಿಂದ ನೋಟೀಸಾದ ನಂತರ ಪ್ರತಿಯೊಂದು ದಿನಕ್ಕೂ 10 ರೂಪಾಯಿಗೆ ಮೀರದಂತೆ ಜುಲ್ಮಾನೆ ಸಹಾ ವಿಧಿಸಲಾಗುವುದು.

ಮಾರ್ಕೆಟ್ಟು ಯಾ ಸಂತೆಗಳಲ್ಲಿ ವಸೂಲಾಗುವ ತೆರಿಗೆ ಪಟ್ಟಿ.

		1 ನೆ ತರಗತಿ.	2 ನೆ ತರಗತಿ.
	ಅಂಗಡಿ ತರಹೆ.	ದರಗಳು.	
		ರೂ. ಆ. ಪೈ.	ರೂ. ಆ. ಪೈ.
1.	ಕುಂಬಾರ ಅಂಗಡಿ	....	0—1—0
2.	ಮಿಠಾಯಿ ಅಂಗಡಿ	0—1—0	0—0—6
3.	ಜವಳಿ ಅಂಗಡಿ	0—4—0	0—2—0
4.	ಕಡಲೇಕಾಯಿ ಅಂಗಡಿ	0—1—0	....
5.	ತರಕಾರಿ ಅಂಗಡಿ	0—0—6	....
6.	ಅಕ್ಕಿ, ಬೇಳೆ ವಗೈರೆ ಅಂಗಡಿ	0—2—0	0—1—0
7.	ಪಸಾರಿ ಅಂಗಡಿ	0—0—6	....
8.	ಮೀನಿನ ಅಂಗಡಿ	0—0—3	....
9.	ಬಿದುರಿನ ಅಂಗಡಿ	0—0—6	....
10.	ಕಿರಾಣಿ ಅಂಗಡಿ (ಚಾಕು ಕತ್ತರಿ)	0—1—0	....
11.	ಹಣ್ಣಿನ ಅಂಗಡಿ	0—0—6	....
12.	ಹೊಗೇಸೊಪ್ಪಿನ ಅಂಗಡಿ	0—0—6	....
13.	ಕಂಬಳಿ ಅಂಗಡಿ	0—0—6	....
14.	ಮೊಟ್ಟೆಗಳ ಅಂಗಡಿ	0—0—6	....
15.	ವೀಳೇದೆಲೆ ಅಂಗಡಿ	0—1—0	....
16.	ಬೆಂಕೀಪೆಟ್ಟಿಗೆ ಅಂಗಡಿ ವಗೈರೆ	0—0—6	....
17.	ಖಡ್ಡಿಪುಡಿ ಅಂಗಡಿ	0—0—6	....
18.	ರೊಟ್ಟಿ ಮತ್ತು ಬಿಸ್ಕತ್ತುಗಳ ಅಂಗಡಿ	0—1—0	....
19.	ಸೀಮೆಯೆಣ್ಣೆ ಅಂಗಡಿ	0—1—0	....

		1 ನೆ ತರಗತಿ.	2 ನೆ ತರಗತಿ.
		ದರಗಳು.	
		ರೂ. ಆ. ಪೈ.	ರೂ. ಆ. ಪೈ.
20.	ಬೆಲ್ಲದ ಅಂಗಡಿ	0—1—0	....
21.	ಉಪ್ಪಿನ ಅಂಗಡಿ ವಗೈರೆ	0—1—0	....
22.	ಫಲಸರಕಿನ ಅಂಗಡಿ	0—1—0	....
23.	ತೆಂಗಿನಕಾಯಿ ಅಂಗಡಿ	0—1—0	....
24.	ದುಪ್ಪಟಿ ವಗೈರೆ ಅಂಗಡಿ	0—1—0	....
25	ದರ್ಜಿ ಅಂಗಡಿ	0—1—0	....
26	ಬಳೇ ಅಂಗಡಿ	0—0—6	....
27.	ರೇಷ್ಮೆ ಅಂಗಡಿ	0—0—6	....
28.	ಅಡಿಕೆ ಅಂಗಡಿ	0—1—0	....
29.	ನಶ್ಯದ ಅಂಗಡಿ	0—1—0	....
30.	ಹುವ್ವಿನ ಅಂಗಡಿ	0—0—6	....
31.	ಇತರ ಚಿಲ್ಲರೆ ಅಂಗಡಿಗಳು	0—0—6	....
32.	ಚಾಕಣಾ ಮಾಂಸದ ಅಂಗಡಿ	0—1—0	....
33.	ಜಾನುವಾರುಗಳು ಆಡು ಕುರಿ	0—0—6	....
34.	ಹಸುಗಳು, ಹೋರಿಗಳು, ಎತ್ತುಗಳು	0—1—0	....
35.	ಕರುಗಳು ಅರ್ಧತೆರಿಗೆ	....	....
36.	ಕೋಳಿಗಳು	0—0—3	....
37.	ಚರ್ಮಗಳು ಮತ್ತು ಹದಮಾಡಿದವುಗಳು	0—1—0	....
38.	ಮೇಲೆ ಹೇಳಿರುವ ಎರಡು ಅಥವಾ 3 ತರಹೆ ಅಂಗಡಿಗಳನ್ನು ಸೇರಿಸಿ, ಒಂದು ಅಂಗಡಿಯನ್ನಾಗಿ ಇಟ್ಟಲ್ಲಿ	0—4—0	....

ಈ ಕೆಳಗೆ ಕಂಡ ಅಂಗಡಿಗಳು ವಿನಹಾ ಬಾಕಿ ಎಲ್ಲಾ ಒಂದೇ ತರಗತಿ.

ಷರಾ:....ರೂ. 5 ಮತ್ತು ಹೆಚ್ಚಿಗೆ ಬೆಲೆ ಬಾಳುವ ಸಾಮಾನಿರುವ ಮಿಠಾಯಿ ಅಂಗಡಿ. Iನೆ ತರಗತಿ
ಇದಕ್ಕೆ ಒಳಪಟ್ಟದ್ದು IIನೆ ತರಗತಿ
ರೂ. 25 ಮತ್ತು ಹೆಚ್ಚಿಗೆ ಬೆಲೆ ಬಾಳುವ ಸಾಮಾನಿರುವ ಜವಳಿ ಅಂಗಡಿ ಅಕ್ಕಿ ಬೇಳೆ ವಗೈರೆ ಅಂಗಡಿಳು. Iನೆ ತರಗತಿ
ಇದಕೆ ಒಳಪಟ್ಟದ್ದು IIನೆ ತರಗತಿ

ಹೆಚ್. ವೆಂಕಟರಾಮಯ್ಯ,
ಫಾರ್ ಪ್ರೆಸಿಡೆಂಟ್.

ಕೃಷ್ಣ ಪ್ರೆಸ್, ತುಮಕೂರು

7

G.R.S. VI G 34]

SUBJECT..

Diary No. of letter replied to L 1678

Section LB
File No. 146-26
Serial No. 20

General and Revenue Secretariat
(LB)
the 192

Proceedings of the Government of
His Highness the Maharaja of Mysore

Date of issue 1. 12. 1928

Signed by Mr. T. K. S. Iy.

Read—

1) Go no. L 1295 LB 21-26-2 dated 20/8/28 sanctioning the rates of fees to be levied at the weekly shandies in the Tumkur District

2) Letter no G.e 880/26-25 dated 8/10/28 from the President of the Tumkur District Board forwarding a resolution of the District Board to levy fees in the weekly shandy at Hebbur at rates sanctioned in the G.O. read above subject to the payment of the share due to the Board according to

~~Order Thereon No.~~

May this be

- i Printed ?
- ii treated as a standing order ?
- iii published in the Gazette, English Part ?
- iv translated ?
- v placed at the disposal of the press ?
- vi published in the Gazette, Kannada Part ?

the proportion that may be fixed later. in and requesting sanction to the levy of fees at the shandy at rates sanctioned in the G.O. read above, pending disposal of the question as to the assignment of a portion of the Collection from shandies to the village panchayets.

Orde — L 3902-3

the recommendation of the President's Sanctioned

6/11

General Secy to Govt

6.11.20

List of enclosures.

To The President DBD Tumkur [illegible] to Govt

opied by.

xamined by